

ಪಂಡಿತ ತಾರಾನಾಥರು ತುಂಗಭದ್ರಾ ಎಂಬಲ್ಲಿ ಕಟ್ಟಿದ ‘ಪ್ರೇಮಾಯತನ’ ಆಶ್ರಮಕ್ಕೆ ಈಗ ನೂರು ವರ್ಷಗಳು. ಸಾಂಸ್ಕೃತಿಕವಾಗಿ ಕರ್ನಾಟಕದ ಹೆಗ್ಗುರುತುಗಳಲ್ಲಿ ಒಂದಾದ ಈ ಆಶ್ರಮದ ಹಾಗೂ ತಾರಾನಾಥರ ಕೆಲಸಗಳ ವೈಶಿಷ್ಟ್ಯವನ್ನು ಗುರುತಿಸುವ, ಅದರ ಮಹತ್ವವನ್ನು ದಾಖಲಿಸುವ ಲೇಖನ ಇಲ್ಲಿದೆ.

ಕರ್ನಾಟಕದಲ್ಲಿ ವಿಶಿಷ್ಟ ಪ್ರಯೋಗಗಳನ್ನು ಮಾಡಿದ ಕಾರಣಕ್ಕೆ ಹೆಸರಾಗಿರುವ ಕೆಲವು ಹಳ್ಳಿಗಳಿವೆ. ಮಧುರಚೆನ್ನರ ಹಲಸಂಗಿ, ಶಿವರಾಮ ಕಾರಂತರ ಸಾಲಿಗ್ರಾಮ, ಮುರಗೋಡ ಮಹಾದೇವಪ್ಪನವರ ಇಂಚಗೇರಿ, ಕೋಟಿಗಾನಹಳ್ಳಿ ರಾಮಯ್ಯನವರ ‘ಆದಿಮ’ದ ತೇರಹಳ್ಳಿಬೆಟ್ಟ, ಕೆ.ವಿ. ಸುಬ್ಬಣ್ಣನವರ ಹೆಗ್ಗೋಡು ಮುಂತಾದವು. ಇವುಗಳಲ್ಲಿ ಹಳೇಬಳ್ಳಾರಿ ಜಿಲ್ಲೆಗೆ ಸೇರಿದ, ಸದ್ಯ ಕರ್ನೂಲು ಜಿಲ್ಲೆಯಲ್ಲಿರುವ ತುಂಗಭದ್ರಾ ಎಂಬ ಸ್ಥಳವೂ ಸೇರಿದೆ. ತುಂಗಭದ್ರಾ ಮತ್ತು ಅದರ ಪಕ್ಕದ ರಾಂಪುರದ ಪರಿಸರವು, ಹಿಂದೆಯೂ ಈಗಲೂ ಕನ್ನಡ ಪ್ರದೇಶವೇ ಆಗಿದೆ. ಹೀಗಾಗಿ, ಇದು ಸಾಂಸ್ಕೃತಿಕವಾಗಿ ಕರ್ನಾಟಕವೇ ಆಗಿದೆ. ಇಲ್ಲಿ ದಕ್ಷಿಣ ಭಾರತದ ಸಾಬರಮತಿ ಎಂದು ಕರೆಯಬಹುದಾದ ‘ಪ್ರೇಮಾಯತನ’ (1921) ಆಶ್ರಮವಿದೆ. ಇದು ತನ್ನ ರಾಜಕೀಯ, ಸಾಮಾಜಿಕ, ಸಾಹಿತ್ಯಿಕ, ಸಂಗೀತಾತ್ಮಕ, ಆಧ್ಯಾತ್ಮಿಕ, ವೈದ್ಯಕೀಯ, ಔದ್ಯಮಿಕ ಕ್ಷೇತ್ರಗಳಲ್ಲಿ ನಡೆಸಿದ ಪ್ರಯೋಗಗಳಿಂದ ಚಾರಿತ್ರಿಕ ಮಹತ್ವವನ್ನು ಪಡೆದಿದೆ. ಈಗ ಈ ಆಶ್ರಮವು ಶತಮಾನ ಪೂರೈಸಿದೆ. ಇದನ್ನು ಸ್ಥಾಪಿಸಿದವರು, ಕನ್ನಡ ಲೇಖಕರೂ ಸಂಗೀತಗಾರರೂ ಶಿಕ್ಷಣತಜ್ಞರೂ ವೈದ್ಯರೂ ಪತ್ರಕರ್ತರೂ ಯೋಗಿಗಳೂ ಸ್ವಾತಂತ್ರ್ಯ ಚಳವಳಿಗಾರರೂ ಆಗಿದ್ದ, ಪಂಡಿತ ತಾರಾನಾಥರು (1891–1942); ಸರೋದ್ ಕಲಾವಿದ ರಾಜೀವ ತಾರಾನಾಥರ ತಂದೆ.

**ಹಿನ್ನೆಲೆ**

ತಾರಾನಾಥರು ಹುಟ್ಟಿದ್ದು ಮಂಗಳೂರಿನಲ್ಲಿ. ತಂದೆ, ನಾಟಕ ಕಂಪನಿಯ ಮಾಲೀಕರೂ ರತ್ನಪಡಿ ವ್ಯಾಪಾರಿಯೂ ಆಗಿದ್ದ ರಂಗರಾವ್. ತಾಯಿ ರಾಜೀವಿಬಾಯಿ. ಚಿಕ್ಕವಯಸ್ಸಿನಲ್ಲೇ ತಂದೆತಾಯಿಯನ್ನು ಕಳೆದುಕೊಂಡ ತಾರಾನಾಥರು, ಹೈದರಾಬಾದಿನಲ್ಲಿದ್ದ ಚಿಕ್ಕಮ್ಮನ ಮನೆಯಲ್ಲಿ ಬೆಳೆದರು. ಅಲ್ಲಿ ಶಿಕ್ಷಣ ಮುಗಿಸಿ, ಬೀದರ್‌ನ ಶಾಲೆಯಲ್ಲಿ ವಿಜ್ಞಾನ ಶಿಕ್ಷಕರಾಗಿ (1912) ನೇಮಕಗೊಂಡರು. ಅದು ಸ್ವಾತಂತ್ರ್ಯ ಚಳವಳಿ ಗರಿಗೆದರುತ್ತಿದ್ದ ಕಾಲ. ಬ್ರಿಟಿಶರ ಜತೆ ಕೈಜೋಡಿಸಿದ್ದ ಹೈದರಾಬಾದ್ ನಿಜಾಮರ ವಿರುದ್ಧ, ಸರ್ಕಾರಿ ನೌಕರರಾಗಿದ್ದ ತಾರಾನಾಥರು, ತಮ್ಮ ತಾತ್ವಿಕ–